ಅದು ಅಧಿಕ ಪ್ರಸಂಗವಾಗುತ್ತದೆ. ಮನೆ ತನ್ನದು ಎಂದು ತಿಳಿದುಕೊಂಡವನ ಹೆಮ್ಮೆಯ ಹುಡಿ ಹಾರಿಸಿ, ಒಳಗೆ ಅಡಗಿರುವ ಕೋಪದ ಕೆಂಡವನ್ನು ಕೆದರುತ್ತದೆ. ಆ ಸಿಟ್ಟಿನಲ್ಲಿ, ಮರಿಗಳನ್ನು ಮುಟ್ಟಿದಾಗ ಎಗರುವ ಬೆಕ್ಕಿನಂತೆ ಮನುಷ್ಯರು ದುಡುಕುತ್ತಾರೆ. ದುಡುಕು ಸಂದಿಗ್ಧ ಪ್ರಸಂಗವೊಂದನ್ನು ಅದರಷ್ಟಕ್ಕೆ ಸುಧಾರಿಸಿಕೊಳ್ಳಲು ಬಿಡದೇ ಅಪರಾಧ ಮಾಡಿಸುತ್ತದೆ."

ಕಾರ್ಲಿತೋನ ಮಾತೇ ಹಾಗೆ. ಸಣ್ಣಸಣ್ಣ ಸಂಗತಿಗಳು ಹೇಗೆ ಹೊಡೆದಾಟ – ಕೊಲೆಗಳಲ್ಲಿ ಮುಕ್ತಾಯವಾಗುತ್ತವೆ ಎನ್ನುವುದನ್ನು ಅವನು ದೃಷ್ಟಾಂತಗಳ ಸಮೇತ ವಿವರಿಸುತ್ತಿದ್ದರೆ, ತತ್ವಜ್ಞಾನಿಯಂತೆ ಕಂಡುಬರುತ್ತಿದ್ದ. ಕಾರ್ಲಿತೋನ ಯೋಜನೆಯನ್ನು ಒಪ್ಪಿದ್ದರೂ ಶಮಿಗೆ ಬೆಡ್ ರೂಮಿನ ಬಾಗಿಲು ದಾಟಲಾಗಲಿಲ್ಲ. ಮನಸ್ಸು ದುರ್ಬಲವಾದಾಗ ಸ್ವಂತ ಕೈಕಾಲುಗಳೂ ಹರತಾಳ ಮಾಡುತ್ತವೆ. ಸದ್ದಾಗದಂತೆ ಬಾಗಿಲು ಅಡ್ಡಮಾಡಿ ಕಾಯತೊಡಗಿದ.

ತಥ್! ದೇಶವಿದೇಶ ಸುತ್ತಲಿಕ್ಕೆ ಹೋದ ಆಸಾಮಿ ಒಂದು ವಾರದಲ್ಲಿಯೇ ಹೇಗೆ ಬಂದ? ಎಲ್ಲವೂ ಗೊತ್ತಿದ್ದವನ ಹಾಗೆ ಕಾರ್ಲಿತೋ, "ಓನರ್ ದಕ್ಷಿಣ ಅಮೆರಿಕೆಗೆ ಪ್ರವಾಸಕ್ಕೆ ಹೋಗಿದ್ದಾನೆ. ಬರುವುದು ಒಂದು ತಿಂಗಳ ನಂತರವೇ. ಮೇಲಾಗಿ ಇದು ಅವನಿಗೆ ವಾಸ್ತವ್ಯದ ಮನೆಯೂ ಅಲ್ಲ. ನೀವು ಓದಿದವರೇ ಹೀಗೆ, ಎಲ್ಲಕ್ಕೂ ಹೆದರಿಕೊಳ್ಳುತ್ತೀರಿ" ಎಂದು ಮೂದಲಿಸಿದ್ದ. ಕಾರ್ಲಿತೋಗೆ ಖಾತ್ರಿಯಿಲ್ಲದಿರುವ ಮಾತೇ ಇಲ್ಲ. ಆದರೆ ಓನರ್ ಊರಿನಲ್ಲಿಲ್ಲ ಎನ್ನುವ ಭರವಸೆ ಸುಳ್ಳಾಗಿತ್ತು. ಕಾರ್ಲಿತೋನನ್ನು ಹಂಗಿಸಲು ನೆಪ ಸಿಕ್ಕಿತೆಂದು ಆ ಸಂದಿಗ್ಧ ಗಳಿಗೆಯಲ್ಲೂ ಶಮಿಗೆ ಖುಷಿಯಾಯಿತು.

ಬಾಗಿಲು ಸಂದಿಯಿಂದ ಸಿಕ್ಕ ಇಣುಕುನೋಟದಲ್ಲಿ ಸೋಫಾದ ಮೇಲೆ, ಸೂರು ನೋಡುತ್ತ ಕುಳಿತವನ ಮುಖ ಕಾಣಲಿಲ್ಲ. ಐದೇ ನಿಮಿಷಗಳ ಹಿಂದೆ ಶಮಿ ಅದೇ ಜಾಗದಲ್ಲಿ ಯಾರನ್ನೂ ನಿರೀಕ್ಷಿಸಿರದೇ, ನಿಶ್ಚಿಂತೆಯಿಂದ ಕುಳಿತಿದ್ದ. ಅಜ್ಞಾನ ನಿಶ್ಚಿಂತೆಯನ್ನು ಒದಗಿಸುತ್ತದೆ, ಸುರಕ್ಷಿತವಾಗಿದ್ದೇವೆ ಎನ್ನುವ ಭ್ರಮೆಯನ್ನು ಹುಟ್ಟಿಸುತ್ತದೆ. ಬಂದವನ ನಿರಾತಂಕ ಮುಖವನ್ನೊಮ್ಮೆ ನೋಡುವ ಕುತೂಹಲ ಹುಟ್ಟಿದರೂ, ದಟ್ಟವಾಗುತ್ತಿದ್ದ ಸಂಜೆಗತ್ತಲು ಸಹಕರಿಸಲಿಲ್ಲ. ಬಂದವ ಸ್ವಲ್ಪಹೊತ್ತು ಕದಲಿದರೂ, ಮೇಲ್ ಬಾಕ್ಸಿನಿಂದ ಪತ್ರಗಳನ್ನು ತರಲು ಹೊರಗೆ ಅಥವಾ ನೀರು ಕುಡಿಯಲು ಅಡುಗೆಮನೆಗೆ ಹೋದರೂ, ಶಮಿ ತಪ್ಪಿಸಿಕೊಳ್ಳಬಹುದಿತ್ತು. ಕೈಲಿದ್ದ ಚೀಲವನ್ನು ಇನ್ನಷ್ಟು ಬಿಗಿಹಿಡಿದು, 'ಅರ್ಧ ಗಂಟೆ ಕಾಯುವುದು, ಬಂದಾತ ಕದಲದಿದ್ದರೆ ಅವನ ಮುಂದೆಯೇ ಓಡುವುದು' ಎಂದು ನಿರ್ಧರಿಸಿ ಕಾಯತೊಡಗಿದ.

## 2

ಹೊರಬಿದ್ದ ನಂತರ ಎಲ್ಲಿಗೆ ಹೋಗಬೇಕೆನ್ನುವುದು ಶಮಿಯ ಇನ್ನೊಂದು ಸಮಸ್ಯೆಯಾಗಿತ್ತು. ವೆಸ್ಟ್ ಎಂಡ್ ಛತ್ರದ ನೆನಪಾಯಿತು. ಬಣ್ಣಗೆಟ್ಟ ಬೆಂಕಿಪೆಟ್ಟಿಗೆಯಿಂದ ಮಾಡಿದ ಆಟಿಗೆಯಂತಿರುವ ಮೂರು ಅಂತಸ್ತಿನ ಆ ಟೌನ್ ಹೌಸ್‌ಅನ್ನು ಶಮಿ ಮತ್ತವನ ಪರಿಚಯದ ದೇಸಿಗಳು ಕರೆಯುತ್ತಿದುದು ಛತ್ರವೆಂದೇ. ವೆಸ್ಟ್ ಎಂಡ್ ಅವೆನ್ಯುವಿನ ಕಟ್ಟ ಕಡೆಯ ಮನೆ. ಅರೆಬರೆ ಕೆಲಸ ಇದ್ದವರು ಉಳಿದುಕೊಳ್ಳುವ ಜಾಗ ಅದು. ಇಂತಿಷ್ಟೇ ಜನ ಉಳಿಯಬಹುದೆನ್ನುವ ಕಟ್ಟಳೆ ಇರಲಿಲ್ಲ. ಹೆಚ್ಚು ಜನ ಬಂದಷ್ಟೂ ಬಾಡಿಗೆ ಕಡಿಮೆ. ಬಾಡಿಗೆ ವಿಷಯದಲ್ಲಿ ಓನರ್ ಶ್ರೀನಿವಾಸ್ ರಾವ್ ಅಪನಂಬಿಕೆ ಬರುವಷ್ಟು ಉದಾರಿ. ಕೊನೆಯ ಡಾಲರನ್ನೂ ಬಿಡದೇ ವಸೂಲು ಮಾಡಿದರೂ ಕಟುಕನಲ್ಲ. 'ಫುಲ್ ಟೈಮ್ ಕೆಲಸ ಸಿಕ್ಕ ಮೇಲೆ